**ದಿನಾಂಕಃ19.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಗೃಹಿಣಿ. ನನಗೆ ಕರ್ನಾಟಕ ಬ್ಯಾಂಕ್ ಮತ್ತು ಸುವರ್ಣ ಸಹಾಕಾರಿ ಬ್ಯಾಂಕಿನಲ್ಲಿ ಖಾತೆ ಇದೆ. ನಿ.ಪಿ.1ರಲ್ಲಿನ ಚೆಕ್ಕನ್ನು ಕರ್ನಾಟಕ ಬ್ಯಾಂಕಿನಲ್ಲಿ ಹಾಜರುಪಡಿಸಿರುತ್ತೇನೆ. ನಮ್ಮ ಯಜಮಾನರು ಅವೆನ್ಯೂ ರಸ್ತೆಯಲ್ಲಿ ರೇಷ್ಮೆ ನೂಲು ವ್ಯಾಪಾರ ಮಾಡುತ್ತಾರೆ. ಅವರಿಗೆ ತಿಂಗಳಿಗೆ ರೂ.20,000/- ಸಂಬಳವಿರುತ್ತದೆ. ಆರೋಪಿಯ ನಮ್ಮ ಸೊದರಅತ್ತೆಯ ಮಗ. ಈ ದೂರನ್ನು ದಾಖಲಿಸುವ ಪೂರ್ವದಲ್ಲಿ ನಾವು ಮತ್ತು ಅವರ ಒಟ್ಟಿಗೆ ಚೆನ್ನಾಗಿ ಇದ್ದೆವು. ದಿ.07.12.2018 ರಂದು ಆರೋಪಿಯು ನನ್ನ ಬಳಿ ಸಾಲವನ್ನು ಕೇಳಿದರು. ಯಾವ ಉದ್ದೇಶಕ್ಕಾಗಿ ಸಾಲ ಕೇಳಿದರು ಎಂದರೆ ಸಾಕ್ಷಿಯು ನನಗೆ ತೊಂದರೆ ಇದೆ ಹಣ ಬೇಕು ಎಂದು ಕೆಳಿದ್ದರಿಂದ ಸಾಲ ನೀಡಿದೆ. ನಾನು ರೂ.6,00,000/- ಗಳನ್ನು ನಗದು ರೂಪದಲ್ಲಿ ಆರೋಪಿಗೆ ನೀಡಿರುತ್ತೇನೆ. ಚೆಕ್ಕಿನ ಮುಖಾಂತರ ನೀಡಲು ತೊಂದರೆ ಇತ್ತು ಎಂದರೆ ಸಾಕ್ಷಿಯು ನಾನು ಸರ್ಕಾರಿ ನೌಕರನಾಗಿರುತ್ತೇನೆ ಚೆಕ್ಕು ಮುಖಾಂತರ ಬೇಡ ನಗದು ರೂಪದಲ್ಲಿ ಕೊಡಿ ಎಂದು ಕೇಳಿದರು. ನಾನು ಆರೋಪಿಗೆ ಸಾಲವನ್ನು ನಮ್ಮ ಮನೆಯಲ್ಲಿ ನೀಡಿದೆ. ಸದರಿ ಸಾಲ ನೀಡಿದಾಗ ಸಂಜೆ 7.00 ಗಂಟೆಯಾಗಿತ್ತು. ಆ ಸಮಯದಲ್ಲಿ ಆರೋಪಿ, ನನ್ನ ಮಗಳು ಕಾವ್ಯ, ರಾಮಕೃಷ್ಣ ಮತ್ತು ಅವರ ಸ್ನೇಹಿತ ಕೃಷ್ಣಮ್ ರಾಜು ಮತ್ತು ನಾನು ಇದ್ದೆವು. ರಾಮಕೃಷ್ಣ ನನ್ನ ಮೈದುನ. ಅವರ ವ್ಯಾಪಾರ ಮಾಡುತ್ತಾರೆ. ಅವರು ರಾಮಕೃಷ್ಣ ಆಶ್ರಮದ ಹತ್ತಿರ ಇರುತ್ತಾರೆ. ಅವರನ್ನು

ನಾನು ಆರೋಪಿಗೆ ಹಣ ನೀಡುವ ವಿಷಯವಾಗಿ ಮನೆಗೆ ಕರೆಯಿಸಿಕೊಂಡಿದ್ದೆ. ನಿ.ಪಿ.10 ಹಣ ಸಂದ ರಶೀದಿ ಮತ್ತು ಆನ್ ಡಿಮಾಂಡ್ ಪ್ರೊನೋಟನ್ನು ನನ್ನ ಮಗಳು ಕಾವ್ಯ ಎಂಬುವವರು ಬರೆದರು. ಅವರು ಈ ದಿನ ನ್ಯಾಯಾಲಯದಲ್ಲಿದ್ದಾರೆ. ಆರೋಪಿಯು ಲಾಲ್‌ಬಾಗ್‌ನಲ್ಲಿ ಕೆಲಸ ಮಾಡುತ್ತಾರೆ.

ನಿ.ಪಿ.10 ನ್ನು ಆರೋಪಿಯೇ ತಂದಿದ್ದರು. ನಾನು ಆರೋಪಿಯನ್ನು ಹೊರತುಪಡಿಸಿ ಬೇರೆಯವರಿಗೆ ಹಣ ನೀಡಿರುವುದಿಲ್ಲ. ನಾನು ಆರೋಪಿಗೆ ರೂ.500/- ಮುಖಬೆಲೆಯ 12 ಬಂಡಲನ್ನು ನೀಡಿರುತ್ತೇನೆ. ಸದರಿ ಸಾಲವನ್ನು ಬಡ್ಡಿಗಾಗಿ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು 6 ತಿಂಗಳ ಅವಧಿಗೆ ಆರೋಪಿಗೆ ನೀಡಿದೆ. ಸದರಿ ಅವಧಿ ಮುಗಿದ ನಂತರ ಆರೋಪಿ ಹಣ ಮರುಪಾವತಿಸಲಿಲ್ಲ. ಅವರ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳಲಿಲ್ಲ ಆದರೆ ಹಣ ಮರಪಾವತಿಸುವಂತೆ ಕೇಳುತ್ತಿದ್ದೆ. ಅದಾದ ನಂತರ ಎರಡು ಮುಕ್ಕಾಲು ವರ್ಷಗಳ ಕಾಲ ನಾನು ಕಾದೆ. ಸದರಿ ಅವಧಿಯಲ್ಲಿ ನಾನು ಹಣವನ್ನು ಬೇರೆ ಎಲ್ಲಾದರೂ ಹೂಡಿಕೆ ಮಾಡಿದ್ದರೆ ನನಗೆ ಲಾಭ ಬರುತ್ತಿತ್ತು ಎಂದರೆ ಸರಿ. ನನಗೆ ನಷ್ಟವಾಗಿದೆ ಎಂಬ ವಿಚಾರವಾಗಿ ನಾನು ಪೊಲೀಸರಿಗೆ ಆರೋಪಿಯ ವಿರುದ್ದ ದೂರು ನೀಡಲಿಲ್ಲ. ದಿ.15.08.2021 ರಂದು ನಾನು ಆರೋಪಿಯ ಬಳಿ ಹಣ ನೀಡುವಂತೆ ಕೇಳಿರುತ್ತೇನೆ. ಅದೇ ದಿನ ಆರೋಪಿಯು ನಿ.ಪಿ.1 ಚೆಕ್ಕನ್ನು ನನಗೆ ನೀಡಿರುತ್ತಾರೆ.

ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ವಕೀಲರ ಕಚೇರಿಯಲ್ಲಿ ಸಹಿ

ಮಾಡಿರುತ್ತೇನೆ. ಸದರಿ ಪತ್ರದಲ್ಲಿರುವ ವಿಷಯಗಳು ಆಂಗ್ಲ ಭಾಷೆಯಲ್ಲಿರುವುದರಿಂದ ಸಂಪೂರ್ಣ ಮಾಹಿತಿ ನನಗೆ ಗೊತ್ತಿಲ್ಲ, ಆದರೆ ಅದರ ವಿಷಯಗಳನ್ನು ನಮ್ಮ ವಕೀಲರು ನನಗೆ ಕನ್ನಡದಲ್ಲಿ ಹೇಳಿರುತ್ತಾರೆ. ನಿ.ಪಿ.1 ರಲ್ಲಿರುವ ಬರವಣಿಗೆ ನನ್ನ ಮಗಳದ್ದು ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿ.ಪಿ.1 ಚೆಕ್ಕನ್ನು ಆರೋಪಿ ತನ್ನ ಮನೆಯಲ್ಲಿ ಸಂಜೆ 4.00 ಗಂಟೆಗೆ ನೀಡಿದರು. ಚೆಕ್ಕಿಗೆ ಸಹಿ ನನ್ನ ಮುಂದೆ ಮಾಡಲಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ.

**ರೂ.6,00,000/-ಗಳನ್ನು ನಾನು ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ಬಂದಿದ್ದೆ. ಸದರಿ ಹಣವನ್ನು ನಾನು ಆರೋಪಿಗೆ ಸಾಲ ನೀಡಿರುತ್ತೇನೆ. ನಾನು ಬೇರೆ ಯಾವುದೋ ಉದ್ದೇಶಕ್ಕಾಗಿ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ಬಂದಿದ್ದೆ ಅದನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ.**

ದಿ.13.10.2021 ರಂದು ನಾನು ಆರೋಪಿಗೆ ನೋಟೀಸು ನೀಡಿರುತ್ತೇನೆ. ಆರೋಪಿಯು ಯಾವ ದಿನಾಂಕದಂದು ಚೆಕ್ಕು ನೀಡಿದನೆಂದು ನೋಟೀಸು ನೀಡಿದ ಸಮಯದಲ್ಲಿ ಗೊತ್ತಿತ್ತು ಎಂದರೆ ಸರಿ. ಸದರಿ ವಿಷಯವನ್ನು ನಾನು ನೋಟೀಸಿನಲ್ಲಿ ತಿಳಿಸಿಲ್ಲ. ನಾನು ಆರೋಪಿ ಹೆಂಡತಿಗೆ ಆರೋಪಿಯು ಯಾವ ಕಾರಣಕ್ಕಾಗಿ ರೂ.6,00,000/- ಹಣವನ್ನು ಸಾಲವಾಗಿ ತೆಗೆದುಕೊಳ್ಳುತ್ತಿದ್ದಾನೆ ಎಂಬ ವಿಷಯ ಕೇಳಲಿಲ್ಲ. ನಾನು ಕಳುಹಿಸಿದ ನೋಟೀಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.10 ದಾಖಲೆಯನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.10 ರಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿಯಲ್ಲ.

ನನ್ನ ಮಗಳು ಬಿ.ಕಾಂ ಪದವೀಧರೆ. ವಿಕ್ಲಂ ಎಂದು ಬರೆಯುವ ಸಲುವಾಗಿ ಅವಳಿಗೆ ಪ್ರತ್ಯೇಕವಾದ ವಿದ್ಯಾರ್ಹತೆ ಹೊಂದಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ನಿ.ಪಿ.10 ನ್ನು ಆರೋಪಿಯೇ ನನ್ನ ಮಗಳ ಕೈಯಲ್ಲಿ ಬರೆಸಿದರು. ಆರೋಪಿಗೆ ನಾನು ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನನ್ನ ವಿರುದ್ದ ಗಿರಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಆ ಸಂಬಂಧ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಈ ಪ್ರಕರಣದ ಸಮನ್ಸ್ ಆರೋಪಿಗೆ ಜಾರಿಯಾದ ನಂತರ ಅವರು ನನ್ನನ್ನು ಠಾಣೆಗೆ ಕರೆಸಿದರು.

**ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಸೋಮಶೇಖರ್.ಎ)**
**ಎಸಿಎಂಎಂ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು**